

ಕರ್ನಾಟಕ ಸರ್ಕಾರ

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

## 2018–19ನೇ ಸಾಲಿನ

ದಿನಾಂಕ : 11–05–2018 ರಿಂದ 31–03–2019ರವರೆಗೆ

## ವಾರ್ಷಿಕ ವರದಿ

Website : www.dbpurapa.in

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
# 2018–19ನೇ ಸಾಲಿನ ವಾರ್ಷಿಕ ವರದಿ

## (ದಿನಾಂಕ: 11.05.2018 ರಿಂದ 31.03.2019ರ ವರೆಗೆ)

**1. ಪೀಠಿಕೆ:**

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವು ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಟ್ಟು ಕಾರ್ಯ ನಿರ್ವಹಿಸುತ್ತಿರುವ ಸ್ವಾಯತ್ತ ಸಂಸ್ಥೆಯಾಗಿರುತ್ತದೆ. ಪ್ರಸ್ತುತ ಪ್ರಾಧಿಕಾರದ ಕಛೇರಿಯು ದಿನಾಂಕ: 11.05.2018 ರಿಂದ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಾಧಿಕಾರದ ಅಧ್ಯಕ್ಷರು ಕಛೇರಿಯ ಮುಖ್ಯಸ್ಥರಾಗಿದ್ದು, ಇವರನ್ನು ರಾಜ್ಯ ಸರ್ಕಾರವು ನೇಮಕ ಮಾಡಿರುತ್ತದೆ. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರ ದರ್ಜೆಯ ಅಧಿಕಾರಿಯು ಈ ಪ್ರಾಧಿಕಾರದ ಸದಸ್ಯ–ಕಾರ್ಯದರ್ಶಿಗಳಾಗಿದ್ದು, ಪ್ರಾಧಿಕಾರದ ಎಲ್ಲಾ ಕಾರ್ಯಚಟುವಟಿಕೆಗಳ ಸಂಬಂಧ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.

**2. ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಕಾರ್ಯಾರಂಭದ ಬಗ್ಗೆ.**

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಳೀಯ ಯೋಜನಾ ಪ್ರದೇಶ ವ್ಯಾಪಿ ್ತಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ, ದೊಡ್ಡಬೆಳವಂಗಲ, ಸಾಸಲು, ಮಧುರೆ ಹೋಬಳಿ ಹಾಗೂ ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಹೆಸರಘಟ್ಟ ಹೋಬಳಿ ಯಿಂದ 257 ಗ್ರಾಮಗಳನ್ನು ಮತ್ತು ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿ ಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿಯ 37 ಗ್ರಾಮಗಳನ್ನು ಒಟ್ಟು 294 ಗ್ರಾಮಗಳನ್ನು ಸರ್ಕಾರದ ಅಧಿಸೂಚನೆ–1 ಸಂಖ್ಯೆ: ನಅಇ–95–ಬಿಎಂಆರ್–2016 ದಿನಾಂಕ: 30.11.2017ರಲ್ಲಿ ಹಿಂತೆಗೆದುಕೊಂಡು ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶಕ್ಕೆ ವರ್ಗಾಯಿಸಲಾಗಿದೆ.


ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4(ಎ) ರಂತೆ ಸರ್ಕಾರದ ಅಧಿಸೂಚನೆ–II ಸಂಖ್ಯೆ: ನಅಇ–95–ಬಿಎಂಆರ್–2016 ದಿನಾಂಕ: 30.11.2017ರಲ್ಲಿ 294 ಗ್ರಾಮಗಳನ್ನೊಳಗೊಂಡಂತೆ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದ್ದು, ಸದರಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನ 265 ಗ್ರಾಮಗಳು ಮತ್ತು ಬೆಂಗಳೂರು ಉತ್ತರ (ಅಪರ) ತಾಲ್ಲೂಕಿನ 29 ಗ್ರಾಮಗಳನ್ನು ಒಳಗೊಂಡಂತೆ ಒಟ್ಟು 294 ಗ್ರಾಮಗಳು ಇದ್ದು, ಸದರಿ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವು 77,277.0 ಹೆಕ್ಟೇರ್ ಇರುತ್ತದೆ. (772.77 ಚ.ಕಿ.ಮೀ.)

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ–95–ಬಿಎಂಆರ್–2016 ದಿನಾಂಕ: 20.03.2018ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4(ಸಿ) ರಂತೆ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿದೆ. ಅದರಂತೆ ಈ ಯೋಜನಾ ಪ್ರಾಧಿಕಾರ ಕಛೇರಿಯು ಸ್ವಂತತ್ರವಾಗಿ ದಿನಾಂಕ: 11.05.2018ರಿಂದ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಯಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದೆ. ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರನ್ನು ಅಧ್ಯಕ್ಷರನ್ನಾಗಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಇವರನ್ನು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿರುತ್ತದೆ ಮತ್ತು ನಗರಸಭೆ ಪೌರಾಯುಕ್ತರು, ದೊಡಬಳ್ಳಾಪುರ ಇವರನ್ನು ಪ್ರಾಧಿಕಾರದ ಸದಸ್ಯರನ್ನಾಗಿ ನೇಮಿಸಲಾಗಿದೆ. ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು, ಪ್ರಾಧಿಕಾರದ ಎಲ್ಲಾ ಕಾರ್ಯ ಚಟುವಟಿಕೆಗಳ ಸಂಬಂಧ ಕಾರ್ಯನಿರ್ವಹಣಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುವರು.

ಸದರಿ ಸಾಲಿನಲ್ಲಿ ದಿನಾಂಕ: 11.05.2018 ರಿಂದ 31.03.2019ರ ವರೆಗೆ ಕೆಳಕಂಡ ಅಧ್ಯಕ್ಷರು ಮತ್ತು ಸದಸ್ಯರುಗಳು ಕಾರ್ಯನಿರ್ವಹಿಸಿರುತ್ತಾರೆ.

| ಕ್ರ.ಸಂ | ಹುದ್ದೆ | ಹೆಸರು | ಕಾರ್ಯನಿರ್ವಹಿಸಿದ ಅವಧಿ |
|---|---|---|---|
| 1 | ಅಧ್ಯಕ್ಷರು | 1. ಶ್ರೀ ಬಿ.ಎಸ್. ಶೇಖರಪ್ಪ, ಭಾಆಸೇ ಮಹಾನಗರ ಆಯುಕ್ತರು, ಬಿಎಂಆರ್‌ಡಿಎ | 11.05.2018 ರಿಂದ 18.07.2018 ರವರೆಗೆ |
| | | 2. ಶ್ರೀ. ಕೆ.ಪಿ . ಮೋಹನ್‌ರಾಜ್, ಭಾಆಸೇ ಮಹಾನಗರ ಆಯುಕ್ತರು, ಬಿಎಂಆರ್‌ಡಿಎ | 19.07.2018 ರಿಂದ 31.03.2019 |
| 2 | ಸದಸ್ಯ ಕಾರ್ಯದರ್ಶಿಗಳು | ಶ್ರೀ ಎನ್.ಕೆ.ತಿಪ್ಪೇಸ್ವಾಮಿ, ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು. | 11.05.2018 ರಿಂದ 31.03.2019 |
| 3 | ಸದಸ್ಯರು | ಶ್ರೀ ಮಂಜುನಾಥ್, ಕೆ.ಎಂ.ಎ.ಎಸ್. ಪೌರಾಯುಕ್ತರು, ದೊಡ್ಡಬಳ್ಳಾಪುರ ನಗರ ಸಭೆ. | 11.05.2018 ರಿಂದ 31.03.2019 |

3. <u>ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ನಕ್ಷೆ.</u>



ದೊಡ್ಡಬಳ್ಳಾಪುರ ಯೋಜನಾ ಪ್ರದೇಶದಲ್ಲಿ ಬರುವ ಗ್ರಾಮಗಳು/ನಗರಗಳ ವಿವರ ಕೆಳಕಂಡಂತಿದೆ.

| ಕ್ರ.ಸಂ | ಗ್ರಾಮ/ನಗರಗಳು | ಸಂಖ್ಯೆ/ವಿಸ್ತೀರ್ಣ |
|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ-ದೊಡ್ಡಬಳ್ಳಾಪುರ ತಾಲ್ಲೂಕು | | |
| 1 | ದೊಡ್ಡಬಳ್ಳಾಪುರ ನಗರಸಭೆ ವ್ಯಾಪ್ತಿ | 67.00 ಚ.ಕಿ.ಮೀ |
| 2 | ದೊಡ್ಡಬಳ್ಳಾಪುರ ಕಸಬಾ ಹೋಬಳಿ | 54 ಗ್ರಾಮಗಳು |
| 3 | ದೊಡ್ಡಬೆಳವಂಗಲ ಹೋಬಳಿ | 43 ಗ್ರಾಮಗಳು |
| 4 | ಸಾಸಲು ಹೋಬಳಿ | 58 ಗ್ರಾಮಗಳು |
| 5 | ತೂಬಗೆರೆ ಹೋಬಳಿ | 67 ಗ್ರಾಮಗಳು |
| 6 | ಮಧುರೆ ಹೋಬಳಿ | 42 ಗ್ರಾಮಗಳು |
| ಬೆಂಗಳೂರು ನಗರ ಜಿಲ್ಲೆ-ಬೆಂಗಳೂರು ಉತ್ತರ ತಾಲ್ಲೂಕು | | |
| 1 | ಹೆಸರುಘಟ್ಟ ಹೋಬಳಿ | 29 ಗ್ರಾಮಗಳು |

ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ 265 ಗ್ರಾಮಗಳು ಮತ್ತು ಬೆಂಗಳೂರು ಉತ್ತರ (ಅಪರ) ತಾಲ್ಲೂಕಿನ 29 ಗ್ರಾಮಗಳನ್ನು ಒಳಗೊಂಡಂತೆ ಒಟ್ಟು 294 ಗ್ರಾಮಗಳು ಇರುತ್ತದೆ. ಸದರಿ ಯೋಜನಾ ಪ್ರದೇಶದ ಉತ್ತರಕ್ಕೆ ಗೌರಿಬಿದನೂರು ತಾಲ್ಲೂಕು, ದಕ್ಷಿಣಕ್ಕೆ ನೆಲಮಂಗಲ ಹಾಗೂ ಬೆಂಗಳೂರು ಉತ್ತರ ತಾಲ್ಲೂಕು, ಪೂರ್ವಕ್ಕೆ ದೇವನಹಳ್ಳಿ ಹಾಗೂ ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಪಶ್ಚಿಮಕ್ಕೆ ಕೊರಟಗೆರೆ ತಾಲ್ಲೂಕುಗಳು ಎಲ್ಲೆಯಾಗಿರುತ್ತದೆ. ದೊಡ್ಡಬಳ್ಳಾಪುರ ಪಟ್ಟಣವು ಬೆಂಗಳೂರಿನಿಂದ 50 ಕಿ.ಮೀ. ದೂರದಲ್ಲಿದ್ದು, ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿ 207, ರಾಜ್ಯ ಹೆದ್ದಾರಿ 9, ರಾಜ್ಯ ಹೆದ್ದಾರಿ–74, ರಾಜ್ಯ ಹೆದ್ದಾರಿ–94 ಹಾಗೂ ರಾಜ್ಯ ಹೆದ್ದಾರಿ–39 ಗಳು ಹಾದು ಹೋಗುತ್ತದೆ.

## 1.ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಆಡಳಿತಾತ್ಮಕ ರಚನೆ:

ಸರ್ಕಾರದ ಆದೇಶದಂತೆ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ ಕಛೇರಿಯು ದಿನಾಂಕ: 11.05.2018ರಿಂದ ಕಾರ್ಯಾರಂಭ ಮಾಡಿದ್ದು, ಪ್ರಸ್ತುತ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕಛೇರಿ, ಬೆಂಗಳೂರು ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಧ್ಯಕ್ಷರು ಕಛೇರಿಯ ಮುಖ್ಯಸ್ಥರಾಗಿದ್ದು, ಸದಸ್ಯ ಕಾರ್ಯದರ್ಶಿಗಳು ಪ್ರಾಧಿಕಾರದ ಕಾರ್ಯನಿರ್ವಹಣಾಧಿಕಾರಿಗಳಾಗಿದ್ದು, ಕಛೇರಿಯ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತಾರೆ.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರಕ್ಕೆ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಒಂದು ಹುದ್ದೆಯನ್ನು ಮಾತ್ರ ಸೃಜಿಸಲಾಗಿದ್ದು, ಈ ಹುದ್ದೆಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ–82–ನಯೋಸೇ–2017 ದಿನಾಂಕ: 07.05.2018ರಲ್ಲಿ ಭರ್ತಿಮಾಡಲಾಗಿದೆ. ಉಳಿದಂತೆ ಯಾವುದೇ ಹುದ್ದೆ ಈ ಪ್ರಾಧಿಕಾರಕ್ಕೆ ಮಂಜೂರಾಗಿರುವುದಿಲ್ಲ.

ಕೆಳಕಂಡ ಹುದ್ದೆಗಳನ್ನು ಮಂಜೂರು ಮಾಡಲು ಪ್ರಸ್ತಾವನೆಯನ್ನು ಸರ್ಕಾರದ ಕಡತ ಸಂಖ್ಯೆ: ನಅಇ–44–ಬಿಎಂಆರ್–2018ರ ಕಡತದಲ್ಲಿ ಪರಿಶೀಲನೆಯಲ್ಲಿದ್ದು, ಸರ್ಕಾರದ ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ.

| ಕ್ರ.ಸಂ | ಹುದ್ದೆ | ವೇತನ ಶ್ರೇಣಿ | ಮಂಜೂರು ಮಾಡಲು ಪ್ರಸ್ತಾಪಿ ಸಲಾದ ಹುದ್ದೆಗಳ ಸಂಖ್ಯೆ |
|---|---|---|---|
| 1 | ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು | 67550–104600 | 1 |
| 2 | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | 52650–97100 | 1 |
| 3 | ನಗರ ಯೋಜಕರು | 43100–83900 | 2 |
| 4 | ಸಹಾಯಕ ನಗರ ಯೋಜಕರು | 33450–62600 | 2 |
| 5 | ಪ್ರಥಮ ದರ್ಜೆ ಸಹಾಯಕರು | 27650–52650 | 1 |
| 6 | ದ್ವಿತೀಯ ದರ್ಜೆ ಸಹಾಯಕರು | 21400–42000 | 1 |
| 7 | ಬೆರಳಚ್ಚುಗಾರರು | 21400–4200 | 2 |
| 8 | ದಲಾಯತ್ | 17000–28950 | 2 |
| | | **ಒಟ್ಟು** | **12** |

ಪ್ರಾಧಿಕಾರದ ದೈನಂದಿನ ಕೆಲಸ ಕಾರ್ಯಗಳ ನಿರ್ವಹಣೆಗಾಗಿ, ಒಬ್ಬ ಉಪನಿರ್ದೇಶಕರು, ಒಬ್ಬ ಸಹಾಯಕ ನಿರ್ದೇಶಕರು, ಮತ್ತು ಒಬ್ಬ ನಗರ ಯೋಜಕರು ಸೇವೆಯನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಯಿಂದ ಅಧಿಕ ಪ್ರಭಾರದಲ್ಲಿ ಅನ್ಯಸೇವೆಯ ಮೇಲೆ ಪಡೆಯಲಾಗಿದೆ. ಆಡಳಿತಾತ್ಮಕ ಕೆಲಸಗಳ ನಿರ್ವಹಣೆಗಾಗಿ ತಾತ್ಕಾಲಿಕವಾಗಿ ಅಕೌಂಟೆಂಟ್, ಪ್ರಥಮ ದರ್ಜೆ ಸಹಾಯಕರು ಹಾಗೂ ಡಾಟಾ ಎಂಟ್ರಿ ಆಪರೇಟರ್ ಸೇವೆಯನ್ನು ಬಾಹ್ಯ ಮೂಲದಿಂದ ಪಡೆಯಲಾಗಿದೆ.

## 1. <u>ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಕಛೇರಿಯ ಸ್ಥಳ:</u>

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:95:ಬಿಎಂಆರ್:2016 ದಿ: 20.03.2018 ರಲ್ಲಿ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿದ್ದು, ಅದರಂತೆ ಈ ಯೋಜನಾ ಪ್ರಾಧಿಕಾರ ಕಛೇರಿಯು ಸ್ವತಂತ್ರವಾಗಿ ದಿ: 11.05.2018ರಿಂದ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಕಛೇರಿ, ಬೆಂಗಳೂರು ಇಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದೆ.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರಕ್ಕೆ ಅಗತ್ಯ ಹುದ್ದೆಗಳು ಮಂಜೂರಾದ ನಂತರ ಕಛೇರಿಯನ್ನು ದೊಡ್ಡಬಳ್ಳಾಪುರ ನಗರಕ್ಕೆ ಸ್ಥಳಾಂತರಿಸುವ ಉದ್ದೇಶ ಹೊಂದಿದ್ದು, ಈ ಸಂಬಂಧ ದಿ: 30.10.2018ರಂದು ನಡೆದ ಯೋಜನಾ

ಪ್ರಾಧಿಕಾರದ 2ನೇ ಸಭೆಯಲ್ಲಿ ತೀರ್ಮಾನ ಕೈಗೊಂಡಿದ್ದು, ಅದರಂತೆ, ಮಾನ್ಯ ಶಾಸಕರು, ದೊಡ್ಡಬಳ್ಳಾಪುರ ಇವರು ನೀಡಿರುವ ಎರಡು ಕಟ್ಟಡಗಳ ಪ್ರಸ್ತಾವನೆಗಳೊಂದಿಗೆ ಲಭ್ಯವಾಗಬಹುದಾದ ಇತರೆ ಕಟ್ಟಡಗಳ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅವುಗಳಲ್ಲಿ ಕಛೇರಿ ಉಪಯೋಗಕ್ಕೆ ಅವಶ್ಯವಿರುವ ಸೂಕ್ತ ಅಳತೆ ಮತ್ತು ವಾಹನ ನಿಲುಗಡೆ ಸೌಕರ್ಯಗಳನ್ನು ಹೊಂದಿರುವ ಒಂದು ಕಟ್ಟಡವನ್ನು ಅಂತಿಮಗೊಳಿಸಲು ಹಾಗೂ ಸದರಿ ಅಂತಿಮಗೊಳಿಸಲಾದ ಕಟ್ಟಡಕ್ಕೆ ಮಾಸಿಕ ಬಾಡಿಗೆ ದರ ನಿಗದಿಪಡಿಸಲು ಲೋಕೋಪಯೋಗಿ ಇಲಾಖೆಯೊಂದಿಗೆ ಸಮಾಲೋಚಿಸಲು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಲಾಗಿತ್ತು.

ದಿನಾಂಕ: 30.10.2018ರಂದು ನಡೆದ ಸಭೆಯ ತೀರ್ಮಾನದಂತೆ ಪರಿಶೀಲಿಸಿ, ಅಂತಿಮವಾಗಿ ದೊಡ್ಡಬಳ್ಳಾಪುರ ನಗರ ಪೋಲಿಸ್ ಠಾಣೆಯ ಮುಂಭಾಗದಲ್ಲಿ 'ಡಿ' ಕ್ರಾಸ್ ರಸ್ತೆಯಲ್ಲಿರುವ ಶ್ರೀಮತಿ ಹೆಚ್.ಪಿ .ಮಮತಾ ಇವರ ಮಾಲೀಕತ್ವದ 103x35 ಅಡಿಗಳ ವಿಸ್ತೀರ್ಣದ ಮೊದಲನೇ ಮಹಡಿಯಲ್ಲಿನ ಕಟ್ಟಡವನ್ನು ಪ್ರಾಧಿಕಾರಕ್ಕೆ ಬಾಡಿಗೆ ಆಧಾರದ ಮೇಲೆ ಪಡೆಯಲು ಅಂತಿಮಗೊಳಿಸಿ ದಿನಾಂಕ: 26.12.2018ರಂದು ಲೋಕೋಪಯೋಗಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಬಾಡಿಗೆ ನಿಗಧಿಪಡಿಸಲು ಕೋರಲಾಗಿದೆ.

## 2. <u>ಯೋಜನಾ ಪ್ರಾಧಿಕಾರದ ಕಾರ್ಯನಿರ್ವಹಣೆ:</u>

**i)** ಸರ್ಕಾರದ ಅಧಿಸೂಚನೆ–I ಮತ್ತು II ರ ಸಂಖ್ಯೆ: ನಅಇ–95–ಬಿಎಂಆರ್–2016 ದಿನಾಂಕ: 30.11.2017ರಲ್ಲಿ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ–95–ಬಿಎಂಆರ್–2016 ದಿನಾಂಕ: 20.03.2018ರಲ್ಲಿ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿದೆ.

ಹೊಸದಾಗಿ ಘೋಷಿಸಲಾದ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ ತಯಾರಿಸಿ ಸರ್ಕಾರದಿಂದ ಅನುಮೋದನೆಯಾಗುವವರೆಗೂ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಗ್ರಾಮಗಳಲ್ಲಿ ಹಿಂದಿನ ಸ್ಥಳೀಯ ಯೋಜನಾ ಪ್ರದೇಶಗಳಲ್ಲಿ ಅನುಮೋದನೆಯಾಗಿರುವ ಮಹಾಯೋಜನೆಯ ಭೂಉಪಯೋಗ ವಲಯಗಳನ್ನು ಹಾಗೂ ವಲಯ ನಿಯಮಾವಳಿಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ದಿನಾಂಕ: 02.06.2018ರಂದು ನಡೆದ ಯೋಜನಾ ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಿ ದಿನಾಂಕ: 18.06.2018ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಪ್ರಸ್ತಾವನೆಯನ್ನು ಪರಿಗಣಿಸಿ, ಸರ್ಕಾರವು ಅಧಿಸೂಚನೆ ಸಂಖ್ಯೆ: ನಅಇ:156:ಬಿಎಂಆರ್:2018 ದಿನಾಂಕ: 29.09.2018ರಂದು ಈ ಕೆಳಕಂಡಂತೆ ಆದೇಶಿಸಿದೆ.

**"**ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಕಲಂ 4(ಎ)(4) ರಲ್ಲಿನ ಅವಕಾಶದನ್ವಯ, ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 95 ಬಿಎಂಆರ್ 2016, ದಿನಾಂಕ: 30.11.2017ರಲ್ಲಿ ಘೋಷಿಸಲಾಗಿರುವ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 9ರಡಿಯಲ್ಲಿ ತಯಾರಿಸಿ ಸರ್ಕಾರದಿಂದ ಅನುಮೋದನೆ ಪಡೆಯುವವರೆಗೆ, ಹಿಂದಿನ ಸ್ಥಳೀಯ ಯೋಜನಾ ಪ್ರದೇಶಗಳಲ್ಲಿ ಈಗಾಗಲೇ ಹಿಂದಿನ

ಯೋಜನಾ ಪ್ರಾಧಿಕಾರಗಳು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಹಾಗೂ ಸರ್ಕಾರದ ವತಿಯಿಂದ ಹೊರಡಿಸಲಾಗಿದ್ದ/ಅನುಮತಿಸಲಾಗಿದ್ದ ಎಲ್ಲಾ ನಿಯಮಗಳು, ನಿಯಮಾವಳಿಗಳು, ಆದೇಶಗಳು, ನಿರ್ದೇಶನಗಳು ಮತ್ತು ಅನುಮೋದನೆಗಳನ್ನು ಸಂರಕ್ಷಿಸಿ, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ಅನುಮೋದಿತ ಮಹಾಯೋಜನೆಯ ವಲಯ ನಿಯಮಾವಳಿಗಳನ್ನು ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಏಕರೂಪವಾಗಿ ಅಳವಡಿಸಿಕೊಳ್ಳಲು ಆದೇಶಿಸಲಾಗಿದೆ**"**.

ಮೇಲ್ಕಂಡ ಸರ್ಕಾರದ ಆದೇಶದನ್ವಯ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಕಾರ್ಯವ್ಯಾಪ್ತಿಯಿಂದ ಹಿಂತೆಗೆದುಕೊಂಡು ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಸೇರಿಸಲಾದ ಪ್ರದೇಶಗಳಿಗೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅನುಮೋದಿತ ಮಹಾಯೋಜನಾ ನಕ್ಷೆಯ ಭೂಉಪಯೋಗ ವಲಯಗಳು ಅನ್ವಯವಾಗುತ್ತದೆ.

ಮುಂದುವರೆದು, ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆಯನ್ನು ಸಿದ್ದಪಡಿಸಿ ಸರ್ಕಾರದ ಅನುಮೋದನೆ ಪಡೆಯುವವರೆಗೂ ನೆಲಮಂಗಲ ಯೋಜನಾ ಪ್ರಾಧಿಕಾರದ ಅನುಮೋದಿತ ವಲಯ ನಿಯಮಾವಳಿಗಳು ಅನ್ವಯವಾಗುತ್ತದೆ.

## ii) ಮಹಾಯೋಜನೆ ತಯಾರಿಕೆ:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ 9(1)ರ ರೀತ್ಯ ಸ್ಥಳೀಯ ಯೋಜನಾ ಪ್ರದೇಶವು ಅಧಿಸೂಚನೆಯಾದ 02 ವರ್ಷಗಳ ಅವಧಿಯೊಳಗಾಗಿ ಯೋಜನಾ ಪ್ರಾಧಿಕಾರವು "ಮಹಾಯೋಜನೆ (Master Plan) ತಯಾರಿಸಿ, ಪ್ರಕಟಿಸಿ, ರಾಜ್ಯ ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸಬೇಕಾಗಿರುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ 9(1)ರ ಅಡಿಯಲ್ಲಿ ಮಹಾಯೋಜನೆ ತಯಾರಿಕೆಗಾಗಿ ಸರ್ವೆ ಕಾರ್ಯ ಪ್ರಾರಂಭಿಸುವ ಪೂರ್ವದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 10ರ ಅಡಿಯಲ್ಲಿ ಮಹಾಯೋಜನೆ ತಯಾರಿಕೆಯ ಇಚ್ಛೆಯನ್ನು ಘೋಷಿಸಿ (Declaration of Intention of Making Master Plan), 60 ದಿನಗಳ ಅವಧಿಗೆ ಸಾರ್ವಜನಿಕ ಸಲಹೆಗಳನ್ನು ಆಹ್ವಾನಿಸಿ ಕರ್ನಾಟಕ ರಾಜ್ಯ ಪತ್ರ ಹಾಗೂ ಒಂದು ಅಥವಾ ಹೆಚ್ಚಿನ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ನೀಡಬೇಕಾಗಿರುತ್ತದೆ.

ಮಹಾಯೋಜನೆ ತಯಾರಿಕೆ ಇಚ್ಛೆಯ ಪ್ರಕಟಣೆ, ಮಹಾಯೋಜನೆ ತಯಾರಿಸಬೇಕಾಗಿರುವ ಸ್ಥಳೀಯ ಯೋಜನಾ ಪ್ರದೇಶ ಎಲ್ಲೆಗಳ ವಿವರಗಳಿರುವ ನಕ್ಷೆ ಹಾಗೂ ಯೋಜನಾ ಪ್ರಾಧಿಕಾರದ ನಡವಳಿಕೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 10ರ ಅಡಿಯಲ್ಲಿ ಮಹಾಯೋಜನೆ ತಯಾರಿಕೆಯ ಇಚ್ಛೆಯನ್ನು ಘೋಷಿಸುವ ಬಗ್ಗೆ, ಕ್ರಮ ಜರುಗಿಸುವ ಕುರಿತು ದಿನಾಂಕ: 21.02.2019ರಂದು ನಡೆದ ಯೋಜನಾ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ.

"ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 9ರ ಅಡಿಯಲ್ಲಿ ಮಹಾಯೋಜನೆಯನ್ನು ತಯಾರಿಸುವ ಬಗ್ಗೆ, ಮಹಾಯೋಜನೆ ತಯಾರಿಕೆ ಇಚ್ಛೆಯ (Declaration of Intention of Making Master Plan) ಘೋಷಣೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ–10ರ ಅಡಿಯಲ್ಲಿ ಪ್ರಕಟಿಸಲು ತೀರ್ಮಾನಿಸಲಾಯಿತು."

ಯೋಜನಾ ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಮಹಾಯೋಜನೆ ತಯಾರಿಕೆಯ ಇಚ್ಛೆಯ ಘೋಷಣೆಯನ್ನು ಪ್ರಕಟಿಸಲು ಕ.ಪ.ಗ್ರಾ.ಯು.ಕಾ.ಕಂ. 10 ರಡಿ ಪ್ರಕಟಿಸಲಾಗಿದೆ.

## 3. <u>ಪ್ರಾಧಿಕಾರದಿಂದ ಅನುಮೋದನೆ ನೀಡಲಾದ ಪ್ರಕರಣಗಳ ವಿವರಗಳು:</u>

### i) <u>ಭೂ ಪರಿವರ್ತನೆ ಪ್ರಕರಣಗಳು:</u>

ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯೊಳಗೆ ಬರುವ ಜಮೀನುಗಳ ಭೂಪರಿವರ್ತನೆ ಬಗ್ಗೆ ಅಭಿಪ್ರಾಯ ನೀಡಲು ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತಿದ್ದು, ಸದರಿ ಪ್ರಕರಣಗಳನ್ನು

ಸರ್ಕಾರದಿಂದ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ಅನುಮೋದನೆಯಾದ ಮಹಾಯೋಜನೆ–2021ರ ಭೂಉಪಯೋಗ ಹಾಗೂ ನೆಲಮಂಗಲ ಯೋಜನಾ ಪ್ರಾಧಿಕಾರದ ವಲಯ ನಿಯಮಾವಳಿಗಳಂತೆ ಪರಿಶೀಲಿಸಿ, ಭೂಪರಿವರ್ತನೆಗೆ ಅಭಿಪ್ರಾಯಗಳನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗುತ್ತಿದೆ.

ಪ್ರಸ್ತುತ ಸಾಲಿನಲ್ಲಿ ಕಂದಾಯ ಇಲಾಖೆಯಿಂದ ಈ ಪ್ರಾಧಿಕಾರದಲ್ಲಿ ವ್ಯವಸಾಯದ ಜಮೀನುಗಳನ್ನು ವ್ಯವಸಾಯೇತರ ಉದ್ದೇಶಗಳಿಗೆ ಭೂಪರಿವರ್ತನೆ ಮಾಡುವ ಬಗ್ಗೆ 92 ಪ್ರಕರಣಗಳನ್ನು ಸ್ವೀಕರಿಸಿದ್ದು, ಅವುಗಳಿಗೆ ಈ ಪ್ರಾಧಿಕಾರದಿಂದ ಅಭಿಪ್ರಾಯ ನೀಡಲಾಗಿದೆ. ಅಲ್ಲದೇ ಕರ್ನಾಟಕ ಭೂಸುಧಾರಣಾ ಕಾಯ್ದೆ, 1961ರ ಕಲಂ 109ರನ್ವಯ ಕಂದಾಯ ಇಲಾಖೆಯಿಂದ 10 ಪ್ರಕರಣಗಳನ್ನು ಸ್ವೀಕರಿಸಿದ್ದು, ಅವುಗಳಿಗೂ ಸಹಾ ಈ ಪ್ರಾಧಿಕಾರದಿಂದ ಅಭಿಪ್ರಾಯ ನೀಡಲಾಗಿದೆ.

**ii)** **<u>ವಿನ್ಯಾಸ ಅನುಮೋದನೆ ಪ್ರಕರಣಗಳು:</u>**

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ವ್ಯಾಪ್ತಿ ಯೊಳಗೆ ಬರುವ ಭೂಪರಿವರ್ತಿತ ಜಮೀನುಗಳಲ್ಲಿ ಉದ್ದೇಶಿತ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುತ್ತಾರೆ. ಈ ರೀತಿ ಸ್ವೀಕೃತಿಗೊಂಡ ಅರ್ಜಿಗಳನ್ನು ನಿಯಮಾವಳಿಯನ್ವಯ ಪ್ರಾಧಿಕಾರದಲ್ಲಿ ತಾಂತ್ರಿಕವಾಗಿ ಪರಿಶೀಲಿಸಿದ ನಂತರ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಿ ಸಭೆಯ ಆಡಳಿತಾತ್ಮಕ ಅನುಮೋದನೆ ಪಡೆದು, ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17ರಂತೆ ತಾತ್ಕಾಲಿಕ ಅನುಮೋದನೆ ನೀಡಲಾಗುತ್ತಿದೆ.

ಸರ್ಕಾರದಿಂದ ಕಾಲಕಾಲಕ್ಕೆ ಜಾರಿಗೊಳಿಸಲಾದ ಆದೇಶ/ಸುತ್ತೋಲೆಗಳನ್ವಯ ವಸತಿ ಬಡಾವಣೆ ಮಾಲೀಕರು ವಿನ್ಯಾಸದಲ್ಲಿನ ಎಲ್ಲಾ ಸಿವಿಲ್ ಕಾಮಗಾರಿಗಳು ಅಂದರೆ (ರಸ್ತೆ, ಸಿಡಿ ವರ್ಕ್ಸ್ ಹಾಗೂ ಚರಂಡಿ ಕೆಲಸಗಳು/ಸಂಪೂರ್ಣಗೊಳಿಸಿ ಉದ್ಯಾನವನ/ಬಯಲುಜಾಗ/ನಾಗರೀಕ ಸೌಲಭ್ಯದ ನಿವೇಶನ ಮತ್ತು ರಸ್ತೆಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿದ ನಂತರ ಅರ್ಜಿದಾರರು ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿದ ನಂತರ ಸಂಬಂಧಿಸಿದ ಇಲಾಖೆಗಳಿಂದ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿರುವ ಬಗ್ಗೆ ಪ್ರಮಾಣ ಪತ್ರಗಳನ್ನು ಪ್ರಾಧಿಕಾರಕ್ಕೆ ಹಾಜರುಪಡಿಸಿ ವಿನ್ಯಾಸದಲ್ಲಿನ ಶೇ.100 ರಷ್ಟು ನಿವೇಶಗಳ ಬಿಡುಗಡೆ ಕೋರಿ ಅರ್ಜಿ ಸಲ್ಲಿಸುತ್ತಾರೆ. ನಂತರ ಪ್ರಾಧಿಕಾರದಿಂದ ಸದರಿ ವಿನ್ಯಾಸವನ್ನು ಅನುಮೋದಿತ ನಕ್ಷೆಯಂತೆ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿದ ಬಗ್ಗೆ ಪರಿವೀಕ್ಷಣೆ ಕೈಗೊಂಡು ಖಚಿತಪಡಿಸಿಕೊಂಡ ನಂತರ ಶೇ. 100 ರಷ್ಟು ನಿವೇಶನಗಳನ್ನು ಪ್ರಾಧಿಕಾರದ ವತಿಯಿಂದ ಬಿಡುಗಡೆಗೊಳಿಸಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ.

ಪ್ರಸ್ತುತ ಸಾಲಿನಲ್ಲಿ 13 ಬಹುನಿವೇಶನ ವಿನ್ಯಾಸಗಳಿಗೆ, 08 ಏಕ ನಿವೇಶನ ವಿನ್ಯಾಸಗಳಿಗೆ ಒಟ್ಟು 21 ವಿನ್ಯಾಸಗಳಿಗೆ ಅನುಮೋದನೆ ನೀಡಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಅನುಷ್ಠಾನಗೊಳಿಸಲು ಕಳುಹಿಸಲಾಗಿದೆ.

**iii)** **<u>ಪ್ರಾರಂಭಿಕ ಪ್ರಮಾಣ ಪತ್ರ ಪ್ರಕರಣಗಳು.</u>**

ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಕಟ್ಟಡ ನಿರ್ಮಿಸಲು ಉದ್ದೇಶಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15ರಂತೆ ಪ್ರಾರಂಭಿಕ ಪ್ರಮಾಣ ಪತ್ರ ಕೋರಿ ಸಲ್ಲಿಸಿದ ಅರ್ಜಿಗಳನ್ನು ಅನುಮೋದಿತ ವಲಯ ನಿಯಮಾವಳಿಯಂತೆ ತಾಂತ್ರಿಕವಾಗಿ ಪರಿಶೀಲಿಸಿ, ಪ್ರಾಧಿಕಾರದ ಅಭಿಪ್ರಾಯದೊಂದಿಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುತ್ತಿದೆ.

ಪ್ರಸ್ತುತ ಸಾಲಿನಲ್ಲಿ 18 ಪ್ರಕರಣಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗಿದೆ.

**iv) ಭೂಉಪಯೋಗ ಬದಲಾವಣೆ ಪ್ರಕರಣಗಳು:**

ಕಾನೂನು ರೀತ್ಯಾ ಇರುವ ಭೂಮಾಲೀಕರು, ಮಹಾಯೋಜನಾ ನಕ್ಷೆಯಲ್ಲಿರುವ ನಿಗಧಿತ ಭೂಉಪಯೋಗದ ಬದಲಿಗೆ ಹೊಸದಾಗಿ ಬೇರೆ ಉದ್ದೇಶಕ್ಕಾಗಿ ಜಮೀನನ್ನು ಅಭಿವೃದ್ಧಿಪಡಿಸಲು ಆಪೇಕ್ಷಿಸಿದ್ದಲ್ಲಿ, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರಕ್ಕೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಭೂಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಲಾಗುತ್ತಿದೆ. ಅರ್ಜಿಯನ್ನು ದಾಖಲಾತಿಗಳೊಂದಿಗೆ ಸರ್ಕಾರದ ಜಾರಿಗೊಳಿಸಲಾದ ಮಾರ್ಗದರ್ಶನದ ಅನ್ವಯ, ಬದಲಾವಣೆ ಬಯಸುವ ಯೋಜನೆ ಸಿದ್ಧಾಂತದನ್ವಯ ಯೋಗ್ಯ ಎಂದು ಭಾವಿಸಿದ್ದಲ್ಲಿ ಮತ್ತು ಅದರಲ್ಲಿ ಸಾರ್ವಜನಿಕ ಹಿತಾಸಕ್ತಿಯಲ್ಲಿ ಇದ್ದು, ಯಾವುದೇ ನಿಯಮಗಳ ವಿರುದ್ಧ ಇಲ್ಲದಿದ್ದ ಪಕ್ಷದಲ್ಲಿ, ಸ್ಥಳೀಯ ಪತ್ರಿಕೆಯಲ್ಲಿ ಈ ಕುರಿತು ಪ್ರಕಟಣೆ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಿ, ಕನಿಷ್ಟ 15 ದಿನಗಳ ಕಾಲಾವಕಾಶ ನೀಡಿ, ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗುತ್ತದೆ.

ಸಾರ್ವಜನಿಕರಿಂದ ಆಕ್ಷೇಪಣೆಗಳು ಸ್ವೀಕರಿಸಿದ್ದಲ್ಲಿ, ಅವುಗಳನ್ನು ಪರಿಶೀಲಿಸಿ ಭೂಉಪಯೋಗ ಬದಲಾವಣೆಗಳ ಕುರಿತು ಪ್ರಾಧಿಕಾರದ ಸಭೆಯಲ್ಲಿ ವಿಮರ್ಶಿಸಿ, ಟರಾವನ್ನು ನಿರ್ಣಯಿಸಿ, ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ/ಮಾಡದೇ ಇರುವ ಬಗ್ಗೆ ಸೂಕ್ತ ಕಾರಣವನ್ನು ನೀಡಿ ನಿರ್ಣಯಿಸಲಾಗುತ್ತದೆ. ಪ್ರಾಧಿಕಾರದ ಸಭೆಯಲ್ಲಿ ಭೂಉಪಯೋಗ ಬದಲಾವಣೆ ಶಿಫಾರಸ್ಸು ಮಾಡಿರುವ ಪ್ರಕರಣಗಳು ಸರ್ಕಾರದ ಮಂಜೂರಾತಿಗಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗುವುದು.

ಪ್ರಸ್ತುತ ಸಾಲಿನಲ್ಲಿ ಒಟ್ಟು 16 ಭೂಉಪಯೋಗ ಬದಲಾವಣೆ ಪ್ರಸ್ತಾವನೆಗಳಿಗೆ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ನಿರ್ಣಯಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಪ್ರಸ್ತುತ ಸಾಲಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 69(2)ರನ್ವಯ ಒಟ್ಟು 10 ಭೂಉಪಯೋಗ ನಿಗಧಿ ಪ್ರಕರಣಗಳಿಗೆ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗಿದೆ.

## 4. ಅಭಿವೃದ್ಧಿ ಕಾಮಗಾರಿಗಳು:

ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ–95–ಬಿಎಂಆರ್–2016 ದಿನಾಂಕ: 20.03.2018ರಲ್ಲಿ ರಚನೆ ಆದನಂತರ, 2018–19ನೇ ಸಾಲಿನಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.

## 5. ಪ್ರಾಧಿಕಾರದ ಸಭೆಗಳು:

ಪ್ರಸ್ತುತ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಒಟ್ಟು 03 ಸಭೆಗಳನ್ನು ನಡೆಸಲಾಗಿದ್ದು, ಸದರಿ ಸಭೆಗಳಲ್ಲಿ ಕೈಗೊಂಡ ತೀರ್ಮಾನಗಳನ್ನು ನಿಯಮಾನುಸಾರ ಕಾರ್ಯಗತಗೊಳಿಸಲು ಕ್ರಮಕೈಗೊಳ್ಳಲಾಗಿದೆ.

## 6. ಪ್ರಾಧಿಕಾರದ ಆಯ ವ್ಯಯ ಅಂದಾಜು

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 68(ಬಿ) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965ರ ನಿಯಮ 22ರನ್ವಯ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ 2019–20 ನೇ ಸಾಲಿನ ಅಂದಾಜು ಆಯವ್ಯಯವನ್ನು ತಯಾರಿಸಿ, ದಿನಾಂಕ: 21.02.2019ರಂದು ನಡೆದ ಪ್ರಾಧಿಕಾರದ 3ನೇ ಸಾಮಾನ್ಯ ಸಭೆಯಲ್ಲಿ ಮಂಡಿಸಿ, ಸಭೆಯ ಅನುಮೋದನೆ ಪಡೆದು, ಆಯವ್ಯಯವನ್ನು ಸರ್ಕಾರದ ಸುತ್ತೋಲೆಯ ಸಂಖ್ಯೆ: ನಅಇ–447–ಮೈಅಪ್ರಾ/2016 ದಿನಾಂಕ: 19.04.2017ರನ್ವಯ ಪ್ರಾಧಿಕಾರದ ಪತ್ರ ದಿನಾಂಕ: 20.03.2019ರಂದು ಅನುಮೋದನೆಗಾಗಿ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರಿಗೆ

ಸಲ್ಲಿಸಲಾಗಿದೆ. ಸದರಿ ಆಯವ್ಯಯದಲ್ಲಿ 2019–20ನೇ ಸಾಲಿಗೆ ರೂ. 7,95,74,595 ಆದಾಯ ಅಂದಾಜಿಸಲಾಗಿದೆ. ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಗೆ ಉತ್ತಮತೆ ಶುಲ್ಕದ ಶೇ. 5ರಷ್ಟು ಮೊತ್ತ ನೀಡುವ ಸಂಬಂಧ ರೂ. 10,00,000ಗಳನ್ನು ಕಾಯ್ದಿರಿಸಲಾಗಿದೆ.

**ಆಯವ್ಯಯ ಅಂದಾಜು ಪಟ್ಟಿ 2019–20ರ ಸಂಕ್ಷಿಪ್ತ ವಿವರ**

| ವಿವರ | 01.04.2018ರಿಂದ 31.12.2018ರ ವರೆಗಿನ ವಾಸ್ತವಿಕ | 01.01.2019ರಿಂದ 31.03.2019ರ ವರೆಗಿನ ನಿರೀಕ್ಷಿತ | ಒಟ್ಟು | 2019–20ನೇ ಸಾಲಿನ ಅಂದಾಜು |
|---|---|---|---|---|
| ಪ್ರಾರಂಭಿಕ ಶಿಲ್ಕು | –– | –– | –– | 4,30,99,595 |
| ಆದಾಯ | 4,25,05,676 | 23,25,000 | 4,48,30,676 | 3,64,75,000 |
| **ಒಟ್ಟು** | **4,25,05,676** | **23,25,000** | **4,48,30,676** | **7,95,74,595** |
| ಸಂದಾಯ | 7,85,581 | 9,45,500 | 17,31,081 | 7,54,10,000 |
| ಅಂತಿಮ ಶಿಲ್ಕು | –– | –– | 4,30,99,595 | 41,64,595 |

## 1. ಪ್ರಾಧಿಕಾರದ ಆದಾಯ ಮತ್ತು ವೆಚ್ಚಗಳು:

**2018–19ನೇ ಸಾಲಿನ ಆದಾಯ ಮತ್ತು ವೆಚ್ಚಗಳು ಈ ಕೆಳಕಂಡತಿರುತ್ತದೆ.**

| ಕ್ರ.ಸಂ | ತಿಂಗಳು | ಆದಾಯ | ವೆಚ್ಚ |
|---|---|---|---|
| 1 | ಜೂನ್–2018 | 15,24,000 | –– |
| 2 | ಜುಲೈ–2018 | 18,62,846 | –– |
| 3 | ಆಗಸ್ಟ್–2018 | 40,500 | 38,302 |
| 4 | ಸೆಪ್ಟೆಂಬರ್–2018 | 31,378 | 432 |
| 5 | ಅಕ್ಟೋಬರ್–2018 | 6,28,592 | 5,18,839 |
| 6 | ನವೆಂಬರ್–2018 | 32,300 | 2,15,985 |
| 7 | ಡಿಸೆಂಬರ್–2018 | 3,81,10,498 | 1,55,839 |
| 8 | ಜನವರಿ–2019 | 1,15,03,014 | 8,76,131 |
| 9 | ಫೆಬ್ರವರಿ–2019 | 27,300 | 2,38,271 |
| 10 | ಮಾರ್ಚ್–2019 | 62,34,313 | 2,21,133 |
| **ಒಟ್ಟು** | | **59,99,471** | **22,61,932** |

2018–19ನೇ ಸಾಲಿನ ವರ್ಗೀಕರಿಸಿದ ಜಮೆ ಮತ್ತು ಖರ್ಚು ವಿವರ ಅನುಬಂಧ–1ರಲ್ಲಿ ನೀಡಲಾಗಿದೆ.

# ಅನುಬಂಧ-1

## ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ 2018-19ನೇ ಸಾಲಿನ ಜಮೆ ಮತ್ತು ಖರ್ಚು ವಿವರ.

| ಕ್ರ.ಸಂ | ಜಮೆ | ಮೊತ್ತ | ಕ್ರ.ಸಂ | ಖರ್ಚು | ಮೊತ್ತ |
|---|---|---|---|---|---|
| 1 | ಪರಿಶೀಲನಾ ಶುಲ್ಕ | 84,083 | 1 | ವೇತನ ಭತ್ಯೆಗಳು | 9,51,410 |
| 2 | ಉತ್ತಮತೆ ಶುಲ್ಕ | 2,90,21,292 | 2 81 | ಲೇಖನ ಸಾಮಾಗ್ರಿ ಖರೀದಿ | 1,11,7 |
| 3 | ಹೆಚ್ಚುವರಿ ಪ್ರತಿ ಶುಲ್ಕ | 17,90049 | 3 | ವೇತನ ಕಟಾವಣೆಗಳು | 2,91,1 |
| 4 | ಭದ್ರತಾ ಠೇವಣಿ | 20,28,000 | 4 | ಪ್ರಕಟಣೆ ವೆಚ್ಚ | 3,06,602 |
| 5 | ಉಸ್ತುವಾರಿ ಶುಲ್ಕ | 26,500 | 5 | ಹೊರಗುತ್ತಿಗೆ ಸಿಬ್ಬಂದಿಗಳ ವೇತನ | 1,91,359 |
| 6 | ಪ್ರಕಟಣಾ ಶುಲ್ಕ | 8,90,000 | 6 | ಆಯಕರ | 2,001 |
| 7 | ಆರ್.ಟಿ.ಐ/ಇತರೆ | 2,492 | 7 | ಪೀಠೋಪಕರಣ ಖರೀದಿ | 46,500 |
| 8 | ಕೆರೆ ಸಂರಕ್ಷಣಾ ಶುಲ್ಕ | 55,10,500 | 8 | ಕಾನೂನು ವೆಚ್ಚ | 3,61,130 |
| 9 | ರಸ್ತೆ ಶುಲ್ಕ | 36,30,000 | | | |
| 10 | ಕಟ್ಟಡ ನಿರ್ಮಾಣ ಶುಲ್ಕ | 20,635 | | | |
| 11 | ದಂಡ | 1,54,763 | | | |
| 12 | ಇತರೆ ಬಡ್ಡಿ | 1,79,80,270 | | | |
| 13 | ಬ್ಯಾಂಕ್ ಬಡ್ಡಿ-1 | 5,72,830 | | | |
| 14 | ಬ್ಯಾಂಕ್ ಬಡ್ಡಿ-2 | 55,477 | | | |
| | **ಒಟ್ಟು** | **5,99,94,741** | | | **22,61,932** |

**1. ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಬಾಧ್ಯತೆಗಳು ಮತ್ತು ಸ್ವತ್ತುಗಳ ಪಟ್ಟಿ**
**ದಿನಾಂಕ: 31.03.2019ರ ಅಂತ್ಯದವರೆಗೆ.**

**(ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965ರ ಫಾರಂ-V ರಂತೆ)**

| ಕ್ರ.ಸಂ | ಬಾಧ್ಯತೆಗಳು | ರೂ. | ಕ್ರ.ಸಂ | ಸ್ವತ್ತುಗಳು | ರೂ. |
|---|---|---|---|---|---|
| 1 | ಸರ್ಕಾರದಿಂದ ಸ್ವೀಕರಿಸಲಾದ ಮೊತ್ತ | | 1 | ಭೂಮಿ ಮತ್ತು ಕಟ್ಟಡಗಳು | ಇಲ್ಲ |
| | i)ಸಾಲಗಳು | ಇಲ್ಲ | 2 | ಉಪಕರಣಗಳು | ಇಲ್ಲ |
| | ii)ಮುಂಗಡಗಳು | ಇಲ್ಲ | 3 | ಮುಂಗಡಗಳು | ಇಲ್ಲ |
| | iii)ಅನುದಾನಗಳು | ಇಲ್ಲ | 4 | ಇತರೆ ಸ್ವತ್ತುಗಳು (ಪೀಠೋಪಕರಣಗಳು) | 46,500.00 |
| 2 | ಹೆಚ್ಚುವರಿ ಬಾಧ್ಯತೆಗಳು | ಇಲ್ಲ | 5 | ಕೈಯಲ್ಲಿರುವ ಹಣ | ಇಲ್ಲ |
| 3 | ನಿಕ್ಷೇಪಗಳು/ಠೇವಣಿ ಭದ್ರತಾ ಠೇವಣಿ | 20,28,000.00 | 6 | ಬ್ಯಾಂಕಿನಲ್ಲಿರುವ ಹಣ | 5,80,02,740.14 |
| 4 | ವೆಚ್ಚ ಕಡಿತದ ನಂತರ ಉಳಿಯುವ ಆದಾಯ | 5,59,74,740.14 | 7 | ಇತರೆ ಹಣ | ಇಲ್ಲ |
| | **ಒಟ್ಟು** | **5,80,02,740.14** | | **ಒಟ್ಟು** | **5,80,49,240.14** |

## 1. ಮಾಹಿತಿ ಹಕ್ಕು ಅಧಿನಿಯಮ, 2005.

ಪ್ರಸ್ತುತ ಸಾಲಿನಲ್ಲಿ ಮಾಹಿತಿ ಹಕ್ಕು ಅಧಿನಿಯಮ, 2005 ರಡಿಯಲ್ಲಿ ಯೋಜನಾ ಪ್ರಾಧಿಕಾರದಿಂದ ಮಾಹಿತಿ ಕೋರಿ 38 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಅವುಗಳಿಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಮಾಹಿತಿಗಳನ್ನು ಒದಗಿಸಲಾಗಿದೆ.

## 2. 2018–19ನೇ ಸಾಲಿನ ಲೆಕ್ಕ ಪರಿಶೋಧನೆ ಮತ್ತು ತನಿಖಾ ವರದಿ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 68(ಸಿ)(2) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965ರ ನಿಯಮ 23(2)ರಂತೆ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ 2018–19ನೇ ಸಾಲಿನ (11.05.2018 ರಿಂದ 31.03.2019 ರವರೆಗೆ) ಲೆಕ್ಕ ಪರಿಶೋಧನಾ ಕಾರ್ಯ ಕೈಗೊಳ್ಳುವಂತೆ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನಾ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಇವರಿಗೆ ದಿನಾಂಕ: 04–04–2019ರ ಈ ಪ್ರಾಧಿಕಾರದ ಪತ್ರದಲ್ಲಿ ಕೋರಲಾಗಿದೆ.

Sd/-
ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,

## 1. ಕಲ್ಯಾಣ ಕಾರ್ಯಕ್ರಮಗಳು.

| | | |
|---|---|---|
| 1. | ವಾರ್ಷಿಕ ಅನುದಾನ ಮತ್ತು ಅದಕ್ಕನುಗುಣವಾಗಿ ಮಾಡಲಾದ ವೆಚ್ಚ | ಇಲ್ಲ |
| 2. | ಬೇಡಿಕೆ, ವಸೂಲಿ ಮತ್ತು ಬಾಕಿ ಪಟ್ಟಿ (ಡಿಸಿಬಿ). | ಇಲ್ಲ |
| 3. | ಅನುಷ್ಠಾನಗೊಳಿಸಲಾದ ಅಭಿವೃದ್ಧಿ ಕಾರ್ಯಕ್ರಮಗಳ / ಆರ್ಥಿಕ/ಭೌತಿಕ ಪ್ರಗತಿ | ಇಲ್ಲ |
| 4. | ತೆಗೆದುಕೊಳ್ಳಲು ಉದ್ದೇಶಿಸಿಲಾದ ಹೊಸ ಕಾರ್ಯಕ್ರಮಗಳ ವಿವರಗಳು | ಇಲ್ಲ |
| 5. | ಪರಿಶಿಷ್ಟಜಾತಿ/ಪ.ಪಂಗಡ/ಮಹಳೆಯರ/ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯಕ್ರಮಗಳ ಆರ್ಥಿಕ/ಭೌತಿಕ ಪ್ರಗತಿ | ಇಲ್ಲ |
| 6. | ವಿಶೇಷ ಘಟಕ ಯೋಜನೆ/ಗಿರಿಜನ ಅಭಿವೃದ್ಧಿ ಯೋಜನೆಗಳ ವಿವರಗಳು | ಇಲ್ಲ |
| 7. | ಕೇಂದ್ರ ಪುರಸ್ಕೃತ/ವಿದೇಶಿ ನೆರವಿನ ಯೋಜನೆಗಳ ವಿವರಗಳು | ಇಲ್ಲ |

ಪ್ರಾಧಿಕಾರಕ್ಕೆ ಸರಕಾರದಿಂದ ಯಾವುದೇ ರೀತಿಯ ಅನುದಾನ ನೀಡಿರುವುದಿಲ್ಲ. ಪ್ರಾಧಿಕಾರವು ಯಾವುದೇ ಯೋಜನಾ ಕಾರ್ಯಗಳನ್ನು ಅನುಷ್ಠಾನಗೊಳಿಸುತ್ತಿರುವುದಿಲ್ಲ.

**ಪ್ರಾಧಿಕಾರದ ಕಾರ್ಯ ಚಟುವಟಿಕೆಗಳು:**

- ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ ತಯಾರಿಕೆ ಯೋಜನಾ ಪ್ರಾಧಿಕಾರದ ವ್ಯಾಪ್ತಿಗಳನ್ನು ಬರುವ ಪಟ್ಟಣ ಮತ್ತು ಅಭಿವೃದ್ಧಿ ಪಥದಲ್ಲಿ ಇರುವ ಗ್ರಾಮಗಳ ಭೌತಿಕ, ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಿ ಮಹಾಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಕರ್ನಾಟಕ ನಗರ ಮತ್ತು ಗ್ರಾಮಂತರ ಯೋಜನಾ ಕಾಯ್ದೆ, 1961ರಂತೆ ಈ ಮಹಾಯೋಜನೆಯನ್ನು ಸಿದ್ಧಪಡಿಸುವುದು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮುಖಾಂತರ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವುದು ಹಾಗೂ ಅನುಷ್ಟಾನಗೊಳಿಸುವುದು.
- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರಡಿಯಲ್ಲಿ ಸಂಬಂಧಿಸಿದ ಇಲಾಖೆ ಮತ್ತು ಸಂಸ್ಥೆಗಳಿಗೆ ತಾಂತ್ರಿಕ ನೆರವು ಮತ್ತು ಅಭಿಪ್ರಾಯ ನೀಡುವುದು.
- ವ್ಯವಸಾಯ ಭೂಮಿಯನ್ನು ವ್ಯವಸಾಯೇತರ ಉದ್ದೇಶಗಳಿಗಾಗಿ ಭೂಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ತಾಂತ್ರಿಕ ಅಭಿಪ್ರಾಯ ನೀಡುವುದು.
- ಭೂಪರಿವರ್ತನೆ ಆಗಿರುವ ಜಮೀನುಗಳಿಗೆ ವಸತಿ, ವಾಣಿಜ್ಯ, ಕೈಗಾರಿಕಾ ಮತ್ತು ಇತರೆ ಉದ್ದೇಶದ ವಿನ್ಯಾಸ ಅನುಮೋದನೆ ನೀಡುವುದು ಮತ್ತು ಕಟ್ಟಡವನ್ನು ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು.

**ಪ್ರಾಧಿಕಾರದ ಕಾರ್ಯ ವಿಧಾನ ಮತ್ತು ಕರ್ತವ್ಯಗಳು:**

| ಕ್ರ.ಸಂ | ಅಧ್ಯಕ್ಷರು | ಸದಸ್ಯ ಕಾರ್ಯದರ್ಶಿಗಳು | ಸದಸ್ಯರು |
|---|---|---|---|
| 1 | ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು, 1965ರನ್ವಯ ಪ್ರಾಧಿಕಾರದ ಸಭೆಯನ್ನು ನಡೆಸುವುದು | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4(ಹೆಚ್)ರಂತೆ ಸಭೆಯ ನಿರ್ಣಯದಂತೆ ಕೆಲಸ ನಿರ್ವಹಿಸುವುದು. ಪ್ರಾಧಿಕಾರದ ಮುಖ್ಯಕಾರ್ಯ ನಿರ್ವಹಣಾಧಿಕಾರಿ | ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸಿ ನಿರ್ಣಯ ಕೈಗೊಳ್ಳುವುದರಲ್ಲಿ ಸಹಕರಿಸುವುದು. |

## ಕರ್ತವ್ಯ ನಿರ್ವಹಣೆ ನಿಗಧಿಪಡಿಸಲಾದ ಸೂತ್ರಗಳು

ಪ್ರಾಧಿಕಾರದ ಕಾರ್ಯನಿರ್ವಹಣೆಯು ವಿವಿಧ ಕಾಯ್ದೆಗಳಲ್ಲಿ ನೀಡಿರುವ ಸೂಚನೆಗಳಂತೆ ಸರ್ಕಾರದಿಂದ ಜಾರಿಗೊಳಿಸಲಾದ ಆದೇಶಗಳು, ಅಧಿಸೂಚನೆಗಳು, ಸುತ್ತೋಲೆಗಳು ಮತ್ತು ವಿವಿಧ ಹಂತಗಳಲ್ಲಿ ಸಭೆಗಳಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅನುಸರಿಸಿ ಕರ್ತವ್ಯಗಳನ್ನುನಿರ್ವಹಿಸಲಾಗುತ್ತದೆ.

## ಪ್ರಾಧಿಕಾರದಲ್ಲಿ ಈ ಕೆಳಕಂಡ ನಿಯಮ/ಕಾಯ್ದೆಗಳನ್ನು ಪರಿಗಣಿಸಿ ಕಾರ್ಯನಿರ್ವಹಿಸಲಾಗುತ್ತಿದೆ.

1. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ, 1961
2. ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965
3. ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ, 1964
4. ಕರ್ನಾಟಕ ಸಿನೇಮಾ (Regulations) ಕಾಯ್ದೆ 1964
5. ರಾಷ್ಟ್ರೀಯ ಹೆದ್ದಾರಿ ಕಾಯ್ದೆ, 1956
6. ಕರ್ನಾಟಕ ರಾಜ್ಯ ಹೆದ್ದಾರಿ ಅಧಿನಿಯಮ 1964.
7. ಕರ್ನಾಟಕ ಸ್ಲಂ ಏರಿಯಾ ಕಾಯ್ದೆ, 1973.
8. ಕರ್ನಾಟಕ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ಸ್ ಕಾಯ್ದೆ 1966
9. ಕರ್ನಾಟಕ ಗೃಹ ಮಂಡಳಿ ಕಾಯ್ದೆ, 1962.
10. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ, 1957.
11. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಾಯ್ದೆ.

## ಪ್ರಾಧಿಕಾರದ ಕಛೇರಿಯ ಅಧೀನದಲ್ಲಿ ಲಭ್ಯವಿರುವ ದಸ್ತಾವೇಜುಗಳು:

1. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರದೇಶದ ಮಹಾಯೋಜನೆ –2021 ನಕ್ಷೆಗಳು ಹಾಗೂ ವರದಿ.
2. ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಗ್ರಾಮಗಳ ನಕ್ಷೆಗಳು
3. ಅನುಮೋದಿತ ವಿನ್ಯಾಸ ನಕ್ಷೆಗಳ ಕಡತಗಳು.
4. ಭೂಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಲಾದ ಕಡತಗಳು
5. ಆಯವ್ಯಯ, ನಗದು ಪುಸ್ತಕಗಳು.
6. ದಾಸ್ತಾನು ವಹಿಗಳು.
7. ವೇತನ/ಹಾಜರಾತಿ ಪುಸ್ತಕ/ ಪೀಠೋಪಕರಣಗಳ ವಹಿ.

## ಮಾಹಿತಿ ಹಕ್ಕು ಅಧಿನಿಯಮ,2005

ಸಾರ್ವಜನಿಕ ಮಾಹಿತಿ ಅಧಿಕಾರಿ – ಉಪ ನಿರ್ದೇಶಕರು.

ಅಪೀಲು ಅಧಿಕಾರಿಗಳ – ಸದಸ್ಯ ಕಾರ್ಯದರ್ಶಿಗಳ

**ಅಂತರ್ಜಾಲ (Website)**

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಮಾಹಿತಿಯ ಅಂತರ್ಜಾಲ www.dbpurapa.in ರಲ್ಲಿ ಲಭ್ಯವಿದ್ದು, ವಿವರಗಳು ಪಾರದರ್ಶಕವಾಗಿ ಸಿಗುವಂತೆ ಮಾಡಲಾಗಿದೆ.

**ಸಾರ್ವಜನಿಕ ಮಾಹಿತಿಗಾಗಿ ಸೌಲಭ್ಯಗಳು:**

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರಕ್ಕೆ ಸಂಬಂಧಿದಂತೆ ಪ್ರಮುಖ ವಿಷಯಗಳ ಕುರಿತಂತೆ ಪ್ರಕಟಣೆಗಳನ್ನು ಹಾಗೂ ಮಾಹಿತಿಗಳನ್ನು ಸೂಚನಾ ಫಲಕದಲ್ಲಿ ಸಾರ್ವಜನಿಕರ ಗಮನಕ್ಕೆ ತರಲಾಗುತ್ತಿದೆ.

1. **ಮಹಾಯೋಜನೆ:**
2. **ಸಾರ್ವಧಿಕ ಮಾಹಿತಿ ಸೌಲಭ್ಯಗಳು**

**Sd/-**
ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,

# DODDABALLAPURA PLANNING AUTHORITY
# ANNUAL REPORT 2018-19
## (Period from 11.05.2018 to 31.03.2019)

1. **Introduction:**

The Doddaballapura Planning Authority is working under the administrative control of the Government and it is a Statutory body constituted by the Government. The Planning Authority is started functioning form 11.05.2018 in the office of the BMRDA, No.1, Ali Askar Road, Bengaluru. The Chairman is the Head of the Authority who is appointed by the Government and the officer of the cadre of Joint Director of Town & Country Planning is the Member –Secretary of the Authority and is the executive Member of the Authority.

2. **Commencement of the Doddaballapura Planning Authority functions:**

In view of the need for systematic Planning and to control and regulate the developments in and around Doddaballapura city, the Karnataka State Government intends to create Doddaballapura Local Planning Area. For this purpose 257 villages of BIAAPA vic., Bangalore Rural District, Doddaballapura Taluk, Kasaba Hobli, Doddabelavangala, Sasalu, Madure and Bangalore North Taluk, Hessargahatta Hobli and 37 villages from Nelamangala Local Planning Area, Bangalore Rural District, Doddaballapura Taluk Madure Hobli, Total 294 villages were taken away from the jurisdiction of BIAAPA and Nelamangala Planning Authority as per Section 4(B) of Karnataka Town & Country Planning Act, 1961, vide Government Notification No: NaAaE/95/BMR/2016 dated: 30.11.2017.

The Doddaballapura Local Planning Area has been declared with 294 villages in Government Notification –II, bearing No: NaAaE-95-BMR-2016 Dated: 30.11.2017. The area covered in the Local Planning Area is 77,277 Ha (772.77 sq. kms). The Doddaballapura Planning Authority has been constituted vide Government Notification No: NaAaE-95-BMR-2016


Dated :20.03.2018, under section 4(c) of the Karnataka Town & Country Planning Act, 1961 Accordingly, the Doddaballapura Planning Authority is started functioning with effect form 11.05.2018 in the Bangalore Metropolitan Region Development Authority office Building, Bangalore.

The Chairman is the head of the office and is appointed by the Government. The Government in Notification No: NaAaE-95-BMR-2016 dated: 20.03.2018 has appointed the Metropolitan Commissioner, Bangalore Metropolitan Region Development Authority, Bangalore as the Chairman of the Authority and Joint Director of Town & Country Planning as the Member-Secretary and Municipal Commissioner, CMC, Doddaballapura has been appointed as the Member of the Authority. The Member –Secretary being the Chief Executive Officer of the office, looks after all the activities of the Authority.

During the year 2018-19 i.e., form 11.05.2018 to 31.03.2019 the following persons worked as Chairman and Member of the Doddaballapura Planning Authority.

| Sl No. | Post | Name | Period |
|---|---|---|---|
| 1 | Chairman | **1.**Sri. B.S. Shekhrappa IAS, Metropolitan Commissioner, BMRDA | 11.05.2018 to 18.07.2018 |
| | | **2.**Sri. K.P. MohanRaj IAS, Metropolitan Commissioner, BMRDA | 19.07.2018 to 31.03.2019 |
| 2 | Member secretary | Sri. N.K.Thippeswamy<br>Joint Director of Town & Country Planning | 11.05.2018 to 31.03.2019 |
| 3 | Member | Sri Manjunath, KMAS,<br>Municipal Commissioner, CMC, Doddaballapura. | 11.05.2018 to 31.03.2019 |

## 3. MAP of Doddaballapura Local Planning Area:



**The villages/towns included in the Doddaballapura Planning Area are as under:**

| SL.NO | VILLAGES/TOWNS | Numbers/Extent |
|---|---|---|
| **Bangalore Rural District –Doddaballapura Taluk** | | |
| 1 | Doddaballapura City Municipal Council Area | 67.00 sq.kms |
| 2 | Doddaballapura Kasaba Hobli | 54 Villages |
| 3 | Doddabelavangala Hobli | 43 Villages |
| 4 | Saasalu Hobli | 58 Villages |
| 5 | Tubagere Hobli | 67 Villages |
| 6 | Madhure Hobli | 42 Villages |
| **Bangalore Urban District – Bangalore North Taluk** | | |
| 1 | Hesarughatta Hobli | 29 Villages |

The Doddaballapura Local Planning Area Consists of 265 villages of Doddaballapura Taluk of Bangalore Rural District and 29 villages of Bangalore North Taluk of Bangalore urban District totally includes 294 villages in the jurisdiction. The boundary of Local Planning Area covered on North by Gowribidanur Taluk, South by Nelamangala & Bangalore North Taluk, East by Devanahally and Chikkaballapura Taluk and West by Koratagere Taluk. The Doddaballapura city is located at a distance of 50 km from Bangalore city. The National Highway-207, the State Highway-9, 74, 94 and 39 are passing through the Local Planning Area.

1. **Administrative Structure of Doddaballapura Planning Authority:**

Doddaballapura Planning Authority office started functioning at Bangalore , BMRDA office building w.e.f. 11.05.2018. The Chairman appointed by the Government will be the head of the office and the Member –Secretary of the Planning Authority being the Chief Executive Officer looks after and supervises all the administrative and technical functions in the office.

The post of Joint Director of Town & Country Planning has been created by the Government in Notification No: NaAaE-82-Nayose-2017 dated: 07.05.2018 No other posts have been created to the Doddaballapura Planning Authority.

The proposal for creation of following posts to the Doddaballapura Planning Authority is under active consideration of the Government in file No: NaAaE-44-BMR-2018.

| Sl. No. | Posts | Scale of Pay | No; of posts proposed for creation. |
|---|---|---|---|
| 1 | Deputy Director of Town & Country Planning | 67550-104600 | 1 |
| 2 | Assistant Director of Town & Country Planning | 52650-97100 | 1 |
| 3 | Town Planner | 43100-83900 | 2 |
| 4 | Assistant Town Planner | 33450-62600 | 2 |
| 5 | First Division Assistant | 27650-52650 | 1 |
| 6 | Second Division Assistant | 24400-42000 | 1 |
| 7 | Typist | 24400-42000 | 2 |
| 8 | Group – D | 17000-28950 | 2 |
| | **Total** | | **12** |

For carrying out day today work of the Authority, the services of one Deputy Director, One Assistant Director and One Town Planner has been procured on an OOD basis from BMRDA. For administration and accounts work, the services of one Accountant, one FDA and one DEO were outsourced during the year.

1. **<u>Office Location of Doddaballapura Planning Authrity:</u>**

The Doddaballapura Planning Authority has been constituted on 20.03.2018 and is started functioning from 11.05.2018 in the office of the Bangalore Metropolitan Region Development Authority, Bangalore temporarily.

After the posts created by the Government for Doddaballapura Planning Authority, there is a proposal to shift the office from Bangalore to Doddaballapura. subject was placed before the 2nd meeting of the Planning Authority held on 30.10.2018 and in the meeting it was resolved to verify the availability of private buildings including the two proposals suggested by Hon'ble MLA of Doddaballapura, which are suitable for office purpose with sufficient parking space and finalise one among them. After the building is finalized, the Member Secretary has been instructed to correspond with the public works Department for fixation of the monthly rent.

After detailed verification, one building belongs to Smt. H.P. Mamatha, which is located opposite to Doddaballapura city police Station, 'D' Cross with a dimension of 103 x 35 feet area (Ist Floor) has been finalized for availing on rental basis Accordingly on 26.12.2018 requested the public works Department, Doddaballapura to decide the monthly rent of the proposed building.

**2. Doddaballapura Planning Authority Functioning & Management:**

**i)** The Doddaballapura Planning Authority has been constituted on 20.03.2018 and is started functioning from 11.05.2018 in the office of the BMRDA, Bangalore temporarily.

For the newly constituted Doddaballapura Local Planning Area, until the Master Plan being prepared and approved by the Government, it is necessary to adopt the Landuse and Zoning Regulations which were earlier approved by the Government for the some area or neighboring Local Planning Area.

This subject was placed before the 1st meeting of the Planning Authority held on 02.06.2018 and in the meeting it was resolved to submit the proposal to Government for adoption of BIAAPA Master Plan land uses and Nelamangala Planning Authority Zoning Regulations for the newly constituted Doddaballapura Local Planning Area. Accordingly the proposal was submitted to Government on 18.06.2018.

The Government considered and approved the Planning Authority's proposal and passed the Notification bearing No: NaAaE:156:BMR:2018 dated: 29.09.2018 . As per Government Notification BIAAPA Master Plan land use proposals are applicable to the areas which were taken out from the jurisdiction of BIAAPA and included in the Doddaballapura Local Planning Area. Also Nelamangala Planning Authority Zonal Regulations are applicable to the Doddaballapura Local Planning Area until the Master Plan is being prepared and approved by the Government.

**ii) Preparation of Master Plan:**

As per section-9(1) of the Karnataka Town & Country Planning Act, 1961, every planning Authority has to prepare the Master Plan within 2 years from the date of declaration of Local Planning Area and submit it to the Government for provisional approval. Before carrying out a survey of the area for the purpose of preparing a Master Plan, the Planning Authority has to make a declaration ofi ts intention to prepare such plan under section-10 of KTCP Act, 1961 and shall submit a copy of such resolution with a copy of plan showing only boundary of the entire area proposed to be included in the Master Plan to the State Government.

This subject was placed before the 3rd meeting of the Planning Authority held on 21.02.2019 and in the meeting it was resolved to publish the declaration ofi ntention to prepare Master Plan for Doddaballapura Local Planning Area under the provisions of Section-10 of KTCP Act, 1961. As per the meeting resolution, the process of publication is in progress.

## 3. Details of approvals given by the Authority:

i) **Land Conversion Cases:** The Planning Authority is furnishing technical opinion for the conversion of the lands from agriculture to non-agricultural purpose for the proposals received from the office of the Deputy Commissioner, Bengaluru Rural /Bengaluru Urban District as per the provisions of Zonal Regulations & the Approved Master Plan for the local planning area of Doddaballapura.

In the current financial year, the Planning Authority has furnished technical opinion for 92 cases to the revenue authorities for the conversion of the land form agriculture to non agricultural purpose. Also furnished technical opinion for 10 cases pertaining to section-109 of Karnataka Land Reforms Act to the Revenue Authorities.

ii) **Layout Approval cases:** The applicants submit the layout application form along with Conversion Order obtained from Deputy Commissioner for the specific purpose and all the other concerned documents to the Planning Authority. After scrutinizing the submitted documents, the proposal will be placed in the meeting of Planning Authority to get the administrative approval for the proposed layout plan. After obtaining the administrative approval, the fee notice for the remittance of the Betterment Fee, Scrutiny Fee & Lake development fee will be given to the applicants. Once the stipulated fee is paid by the applicants to the office, as per the section 17 of the Karnataka Town & Country Planning Act, 1961, the provisional approval will be given to the layout plan as per the norms.

After ensuring the completion of all development works such as formation of the roads, C.D works, Drainage works, Drinking Water Connection, Electric Power Connection, Fencing & Gardening of Parks, Fencing of C.A areas, Street lighting & handing over of Roads & Parks to Local bodies & C.A sites to Planning Authority at free of cost, The Planning Authority after conducting the physical inspection & verification, will accord the approval for release of 100% of sites in the Layout.

The Planning Authority has given 13 such approval to the multi unit layouts & 08 Single unit layouts, total 21 layouts in the current financial year & sent to the concerned local

bodies to take up further action & to initiate the implementation works.

**iii) Commencement Certificate Cases:**

The Planning Authority issues commencement certificates in respect of the proposals received in its jurisdiction for the construction of the building under sec 15 of the Karnataka Town & Country Planning Act, 1961. The approved building plan along with the commencement certificates will be sent to the concerned local authority to take up further action at their end. The Planning Authority has given 18 commencement certificates in this financial year.

**iv) Change of Land use Cases:**

The owner or the legal entity of the land, who intends to develop his land for the purpose other than that earmarked in the approved Master Plan, has to make an application, along with relevant documents, to the Doddaballapura Planning Authority for consideration. The authority shall, after verification as per the guidelines issued by the Government, ifi t finds that the changes sought are relevant to planning principles and are in public interest and are not in contravention to any other statute, publish the proposal in one or more daily newspapers, inviting objections from the public within a period of not less than fifteen days.

The Authority then reviews the Change of Land Use proposal with the public objections received if any and passes a resolution, recording reasons, regarding its consideration or non-consideration for change ofl and use. The CLU cases considered by the Authority are submitted to the Government for approval through Bangalore Metropolitan Region Development Authority. The Government, with the technical opinion of the Bangalore Metropolitan Region Development Authority passes order approving or rejecting the case, as it thinks fit. The Authority and the owner of the land shall abide by such Government order.

In the Current financial year the Authority has cleared 16 cases of change ofl and use and 10 cases ofl and use assigning under the provisions of Section 69(2) of KTCP Act, 1961.

**4. <u>Development works:</u>**

No development works have been taken up during the year 2018-19 from the date of Constitution of the Authority in Government Notification No: NaAaE-95-BMR-2016 dated: 20.03.2018.

**5. <u>Meetings of the Authority:</u>**

The Planning Authority has conducted 03 meetings in the current financial year. All necessary actions has been taken to implement the decisions taken at the authority meetings.

**6. Budget:**

As per Section 68(b) of the Karnataka Town & Country Planning Act, 1961 and as per Rule 22 of the Karnataka Planning Authority Rules, 1965, the planning Authority has prepared the budget for the financial year 2019-20 and placed the subject before the 3rd meeting of the Authority held on 21.02.2019 and the budget has been approved, The budget has been sent to the Deputy Commissioner, Bangalore Rural District on 20.03.2019 for approval as per Government Circular No: UDD-447-MyApra-2016 dated: 19.04.2017. In the budget an amount of Rs. 7,95,74,595/- has been envisaged for the year 2019-20. Out of this estimated amount Rs. 10,00,000/- has been earmarked for making payment towards 5% of the total collection of Betterment charges to the Karnataka State Town Planning Board.

## Brief description of 2019-20 budget estimate.

| Description | Actuals from 01.04.2018 to 31.12.2018 | Anticipated from 01.01.2019 to 31.03.2019 | Total | Estimate for the year 2019-20 |
|---|---|---|---|---|
| Opening balance | - | - | - | 4,30,99,595 |
| Receipt | 4,25,05,676 | 23,25,000 | 4,48,30,676 | 3,64,75,000 |
| Total | 4,25,05,676 | 23,25,000 | 4,48,30,676 | 7,95,74,595 |
| Expenditure | 7,25,581 | 9,45,500 | 17,31,081 | 7,54,10,000 |
| Closing Balance | -- | -- | 4,30,99,595 | 41,64,595 |

**1. Details of Income & Expenditure**

**Income & Expenditure details for the Year 2018-19.**

| Sl No. | Months | Income | Expenditure |
|---|---|---|---|
| 1 | June 2018 | 15,24,000 | -- |
| 2 | July 2018 | 18,62,846 | -- |
| 3 | August 2018 | 40,500 | 38,302 |
| 4 | September 2018 | 31,378 | 432 |
| 5 | October 2018 | 6,28,592 | 5,15,839 |
| 6 | November 2018 | 32,300 | 2,15,985 |
| 7 | December 2018 | 3,81,10,498 | 1,55,839 |
| 8 | January 2019 | 1,15,03,014 | 8,76,131 |
| 9 | February 2019 | 27,300 | 2,38,271 |
| 10 | March 2019 | 62,34,313 | 2,21,133 |
| **Total** | | **59,99,474** | **22,61,932** |

The classified receipt & expenditure details for the year 2018-19 is as in Annexure-I

# Annexure-I

## Receipt & Expenditure Statement for the year 2018-19

| Sl No. | Receipt | Amount | Sl No. | Expenditure | Amount |
|---|---|---|---|---|---|
| 1 | Scrutiny Charges | 84,083 | 1 | Salaries & Allowances | 9,51,410 |
| 2 | Betterment levy | 2,90,21,292 | 2 | Stationary purchase | 1,11,781 |
| 3 | Supply of copies | 17,900 | 3 | Salary Deductions | 2,91,149 |
| 4 | Security Deposit | 20,28,000 | 4 | Publication charges | 3,06,602 |
| 5 | Suspension charges | 26,500 | 5 | Outsource Salary | 1,91,359 |
| 6 | Publication charges | 8,90,000 | 6 | Income Tax(TDS) | 2001 |
| 7 | RTI/MISC | 2,492 | 7 | Furniture purchase | 46,500 |
| 8 | Lake Protection fee | 55,10,500 | 8 | Legal fees | 3,61,130 |
| 9 | Road fee | 36,30,000 | | | |
| 10 | Building permission fee | 20,635 | | | |
| 11 | Penalty | 1,54,763 | | | |
| 12 | Other Interest | 1,79,80,270 | | | |
| 13 | Bank Interest I | 5,72,830 | | | |
| 14 | Bank Interest II | 55,477 | | | |
| | **Total** | **5,99,94,741** | | | **22,61,932** |

1. **Balance sheet of the Doddaballapura Planning Authority as at the end of 31st March 2019.**

**( As per FORM-V of KPA Rules, 1965)**

| Sl. No. | Liabilities | Rs | Sl. No. | Assets | Rs |
|---|---|---|---|---|---|
| 1 | Amount received from Government by way of | | 1 | Lands & Buildings (book value) | -NIL- |
| | i) Loans | -NIL- | 2 | Tools & Plants | -NIL- |
| | ii) Advances | -NIL- | 3 | Advances | -NIL- |
| | iii) Grants | -NIL- | 4 | Other item of assets (Furnitures) | 46,500.00 |
| 2 | Outstanding liabilities | -NIL- | 5 | Cash on hand | -NIL- |
| 3 | Deposits (Security) | 20,28,000.00 | 6 | Cash at Bank | 5,80,02,740.14 |
| 4 | Excess ofi ncome over expenditure | 5,59,74,740.14 | 7 | Imprest | -NIL- |
| | **Total** | **5,80,02,740.14** | | **Total** | **5,80,49,240.14** |

13. **Right to Information Act, 2005:**

In the current financial year, 38 numbers of applications received by the authority for seeking information under RTI Act, 2005. The required information has been provided by the Authority for all the 38 cases within the stipulated time.

14. **Audit Report for the Year 2018-19**

As per Section 68(c)(2) of the Karnataka Town & Country Planning Act, 1961 and as per Rule 23(2) of the Karnataka Planning Authority Rules, 1965. The Principal Director, Karnataka State Accounts and Audit Department. Bangalore has been requested to take up the Audit on the accounts of the Doddaballapura Planning Authority for the year 2018-19 (11.05.2018 to 31.03.2019) in this office letter dated 04.04.2019.

SD/-
Member Secretary
Doddaballapura Planning Authority

1. Preparation of master plan for the local planning area: To conduct physical, socio & economic survey & to prepare the master plan for the local planning area & to submit the same for the approval of the government through Bengaluru Metropolitan Region Development Authority as per the Karnataka Town & Country Planning act 1961 basides control of the developments & to ensure the enforcement of the master plan in the local planning area.
2. Furnishing the Technical opinion & assistance to the Various concerned departments/institutions under the Karnataka Town & Country Planning Act.
3. Furnishing technical opinion to the Revenue Department for conversion of agricultural lands to non-agricultural purposes.
4. Furnishing the commencement certificates to the local bodies in the jurisdiction for the construction of the buildings & as well as giving approval to the residential, commercial, industrial & other layouts in the converted lands in its jurisdiction.

**Duties & Functions of the Planning Authority:**

| Sl.No. | Chairman | Member –Secretary | Member |
|---|---|---|---|
| 1. | To Conduct the Authority meeting in the jurisdiction of LPA as per the Karnataka Planning Authority Rules, 1965. | To Carry out Overall supervision/execution of the office works & to implement the Planning Authority meeting decisions as per the sec-4(H) of the Karnataka Town & Country Planning Act, 1961. | To Participate in the Authority meetings & to discuss the various subjects in the meeting with regard to decision making aspects. |

**Various goals set for the discharge of the Duties by the Planning Authority:**

The Planning Authority is discharging its duties as per the guidelines of the various Government orders /circulars & carries out its functions in implementing the decisions taken at the Authority meetings at various stages.

**Various Acts/rules followed for discharging day to day functions of the Authority:**

a. The Karnataka Town & Country Planning Act, 1961.
b. The Karnataka Planning Authority rules, 1965.
c. The Karnataka Municipality Act, 1964.

d. The Karnataka Cinema (regulations) Act, 1964.
e. The National Highway Act, 1956.
f. The Karnataka State Highway Authority rules, 1964.
g. The Karnataka Slum Area Act, 1973.
h. The Karnataka Industrial Area Development Act, 1966.
i. The Karnataka Housing Board (K.H.B) Act, 1962.
j. K.C.S.R. 1957.
k. Karnataka State Pollution Control Board Act, (KSPCB).

**Details of the assets & inventories available at the Planning Authority office:**

1. Report of the Government Approved Interim Master Plan maps.
2. Report of the Government Approved Master Plan – 2031 maps.
3. Village maps of all the villages coming under the jurisdiction of LPA.
4. Files pertaining to layouts approved by the Planning Authority since its inception.
5. Files pertaining to the technical opinion given to the revenue department regarding land commission.
6. Files pertaining to building plan commencement certificate.
7. Budget & cash books.
8. Stock Register.

**Details of the Officers designated in the Planning Authority to work under the Right to Information Act, 2005**

1. Public information officer – Deputy Director of Town & Country Planning, Doddaballapura Planning Authority.
2. Appellate Authority – Member Secretary, Doddaballapura Planning Authority.

**Planning Authority Website:**

The Planning Authority office is functioning at 2nd Main Road, Sadashivanagar, Nealamangala-562123, Bengaluru Rural District. All the information pertaining to the organizational setup, functions & duties of the Planning Authority are available to the Planning Authority office website: www.dbpurapa.in

**Facilities available for the information of the General public:**

All the information & notifications pertaining to the Doddaballapura Planning Authority office are displayed in the notice board meant for the general public.

1. **Master Plan:** BIAAPA Master Plan proposals are applicable to the areas which were taken out from the jurisdiction of BIAAPA and included in the Ddoddaballapura Local Planning Area. The Government has declared Doddaballapura Local Planning Area in

Government Notification No: I & II bearing No. NaAaE-95-MBR-2016 dated: 20.03.2018. Accordingly, Master Plan is required to be proposed for Doddaballapura Planning Authority. The approval of the Authority has been accorded to declare the intention of preparing Master Plan in the meeting of the Authority held on 21.02.2019.

**Sd/-**
Member Secretary
Doddaballapura Planning Authority

## Balance sheet of the Doddaballapura Planning Authority as at the end of 31st March 2019.

## ( As per FORM-V of KPA Rules, 1965)

| Sl. No. | Liabilities | Rs | Assets | Rs |
|---|---|---|---|---|
| 1 | Amount received from Government by way of | | 1. Lands & Buildings (book value) | -NIL- |
| | i) Loans | -NIL- | 2. Tools & Plants | -NIL- |
| | ii) Advances | -NIL- | 3. Advances | -NIL- |
| | iii) Grants | -NIL- | 4. Other item of assets (Furnitures) | 46,500 |
| 2 | Outstanding liabilities | -NIL- | 5. Cash on hand | -NIL- |
| 3 | Deposits (Security) | 20,28,000 | 6. Cash at Bank | 5,80,02,740 |
| 4 | Excess ofi ncome over expenditure | 5,59,74,740.14 | 7. Imprest | -NIL- |
| | **Total** | **5,80,02,740.14** | **Total** | **5,80,49,240.14** |

## Balance sheet of the Doddaballapura Planning Authority as at the end of 31st March 2019.

## ( As per FORM-V of KPA Rules, 1965)

| Sl. No. | Liabilities | Rs | Assets | Rs |
|---|---|---|---|---|
| 1 | Amount received from Government by way of | | 1. Lands & Buildings (book value) | -NIL- |
| | i) Loans | -NIL- | 2. Tools & Plants | -NIL- |
| | ii) Advances | -NIL- | 3. Advances | -NIL- |
| | iii) Grants | -NIL- | 4. Other item of assets (Furnitures) | 46,500 |
| 2 | Outstanding liabilities | -NIL- | 5. Cash on hand | -NIL- |
| 3 | Deposits (Security) | 20,28,000 | 6. Cash14at Bank | 5,80,02,740 |
| 4 | Excess ofi ncome over expenditure | 5,59,74,740.14 | 7. Imprest | -NIL- |
| | **Total** | **5,80,02,740.14** | **Total** | **5,80,49,240.14** |